# ಕಾಲನ ಕ್ಯಾಪ್ಸೂಲಿನಲ್ಲಿ ನಂದಿ

ಚಿಕ್ಕಬಳ್ಳಾಪುರ ಜಿಲ್ಲೆಯ ನಂದಿ ವಿಶ್ವಪ್ರಸಿದ್ಧ ಗಿರಿಧಾಮ. ನಂದಿಗೆ ಬಂದವರು ಅಲ್ಲಿನ ಪ್ರಾಕೃತಿಕ ಸೌಂದರ್ಯಕ್ಕೆ ಮರುಳಾಗುತ್ತಾರೆ. ಕೊಂಚ ಕಣ್ಣರಳಿಸಿ ನೋಡಿದರೆ, ಚಾರಿತ್ರಿಕ ವಿಶೇಷಗಳು ಕೂಡ ಬೆಟ್ಟದಲ್ಲಿ ಕಾಣಸಿಗುತ್ತವೆ.



■ ಡಿ.ಜಿ. ಮಲ್ಲಿಕಾರ್ಜುನ

ಹಿತವಾದ ಚಳಿಯಲ್ಲಿ ಬೆಳ್ಳಂಬೆಳಗ್ಗೆಯೇ ಚಿಕ್ಕಬಳ್ಳಾಪುರ ಜಿಲ್ಲೆಯ ಪ್ರಸಿದ್ಧ ನಂದಿಬೆಟ್ಟಕ್ಕೆ ಬೆಚ್ಚನೆ ಬಟ್ಟೆ ಧರಿಸಿ ಹೊರಟೆವು. ಬೆಟ್ಟದ ಏರುದಾರಿಯಲ್ಲಿ ರ್‍ರೊಂಯ್... ರ್‍ರೊಂಯ್... ಎನ್ನುತ್ತಾ ನಮ್ಮ ಕಾರನ್ನು ಸಾಲು ಸಾಲು ಬೈಕುಗಳು ಹಿಂದಿಕ್ಕಿ ಸಾಗುತ್ತಿದ್ದವು. ವಾರಾಂತ್ಯದಲ್ಲಿ ಜನಸಂದಣಿ ಹೆಚ್ಚೆಂದು ವಾರದ ನಡುವಲ್ಲಿ ಬಂದರೂ ಜನರೇನೂ ಕಡಿಮೆಯಿರಲಿಲ್ಲ. ಹತ್ತಿರದ ಶಿಡ್ಲಘಟ್ಟದ ನಮಗಿಂತ ದೂರದ ಬೆಂಗಳೂರಿಗರೇ ಹೆಚ್ಚಾಗಿ ಮುಂಜಾನೆಯ ನಂದಿಬೆಟ್ಟದ ನಿಸರ್ಗದ ವಿದ್ಯಮಾನಗಳಿಗೆ ಸಾಕ್ಷಿಯಾಗುತ್ತಾರೆ.

ನಮ್ಮ ವಾಹನವನ್ನು ನಿಲ್ಲಿಸಿ ಪಿಡಬ್ಲ್ಯೂಡಿ ಅತಿಥಿಗೃಹದ ಪಕ್ಕಕ್ಕೆ ಹೋಗುವಷ್ಟರಲ್ಲಿ ಹವ್ಯಾಸಿ ಛಾಯಾಗ್ರಾಹಕರು ಹಲವಾರು ಮಂದಿ ಅಲ್ಲಿದ್ದರು. ನೋಡಿದರೆ ಕಣ್ಮುಂದೆ ಹಾಲ್ಗಡಲು ಆವರಿಸಿತ್ತು. ದೇವ–ದಾನವರು ಮೇರುಗಿರಿಯನ್ನೇ ಕಡೆಗೋಲನ್ನಾಗಿಸಿಕೊಂಡು, ಹಲವು ಹೆಡೆಯ ವಾಸುಕಿಯನ್ನು ಹಗ್ಗವನ್ನಾಗಿ ಮಾಡಿಕೊಂಡು ಹಾಲ್ಗಡಲನ್ನು ಕಡೆದರಂತೆ. ಇಲ್ಲಿ ನಮಗೆ ಕಳವಾರಬೆಟ್ಟವನ್ನು (ಸ್ಕಂದಗಿರಿಯನ್ನು) ಸುತ್ತುವರೆದ ಹಾಲ್ಗಡಲಿನ ದೃಶ್ಯ ಕಂಡುಬಂದಿತು. ನೀಲಾಗಸದ ಹಿನ್ನೆಲೆಯಲ್ಲಿ ಹಾಲ್ಗಡಲಿನಂತೆ ಬಿಳಿಮೋಡಗಳು ಸ್ಕಂದಗಿರಿಯನ್ನು ಆವರಿಸಿ, ಚನ್ನಗಿರಿಯತ್ತ ಸಾಗುತ್ತಿವೆ, ಕೆಳಗಿನ ಭೂದೃಶ್ಯ ಅಲ್ಲಲ್ಲಿ ಇಣುಕುತ್ತಿವೆ. ಅಬ್ಬಬ್ಬಾ! ನೋಡಲು ಎರಡು ಕಣ್ಣು ಸಾಲದು...

## ಮರಾಠರ ಕಾಲದ ಶಾಸನ

'ಯೋಗನಂದೀಶ್ವರ ದೇವಸ್ಥಾನದ ಗೋಡೆಯ ಮೇಲೆ ಮರಾಠರ ಕಾಲದ ಸಂಸ್ಕೃತ ಲಿಪಿಯ ಶಾಸನವಿದೆ, ಹೋಗಿ ಫೋಟೊ ತಗೊಂಡು ಬನ್ನಿ' ಎಂದು ಶಾಸನ ತಜ್ಞ ಪ್ರೊ. ಕೆ.ಆರ್.ನರಸಿಂಹನ್ ಹೇಳಿದ್ದರು. ನಂದಿಗಿರಿಧಾಮದಲ್ಲಿ 11ನೇ ಶತಮಾನದಲ್ಲಿ ಚೋಳರಿಂದ ನಿರ್ಮಾಣವಾದ ಯೋಗನಂದೀಶ್ವರ ದೇವಸ್ಥಾನವಿದೆ. ದೇವಸ್ಥಾನದ ಪಶ್ಚಿಮ ಹೊರಗೋಡೆಯಲ್ಲಿ ಈ ಶಿಲಾಶಾಸನವಿದೆ.

'ಶ್ರೀ ನಂದೀಶ್ವರಾಯ ನಮಃ, ದೇಶೀ ಕರ್ನಾಟಕೇಪೂರ್ವೇಪರ್ವತೋನಂದಿನಾಮಕಃ...' ಎಂದು ದೇವನಾಗರಿ ಲಿಪಿಯ ಶಾಸನದಲ್ಲಿ ನಂದಿಗಿರಿಯ ಬಣ್ಣನೆಯಿದೆ. "ಅತ್ಯುನ್ನತವಾಗಿರುವ ಈ ನಂದಿ ಪರ್ವತ ಏರಲು ಅಸದಳವಾಗಿದ್ದು, ಇದನ್ನು ಉಪಕ್ರಮಿಸಲು ಒಂದೇ ಒಂದು ದಾರಿಯಿರುತ್ತದೆ. ಮಾರ್ಗಮಧ್ಯದಲ್ಲಿ ಸಂಪಿಗೆ, ಅಶ್ವತ್ಥ, ಕಿತ್ತಳೆ, ಹೊಂಗೆ ಮೊದಲಾದ ಹೆಸರಿನ ಹೇರಳ ವೃಕ್ಷಗಳಿವೆ. ಚಿಕ್ಕಬಳ್ಳಾಪುರ ರಾಜ್ಯದ ಗಿರಿದುರ್ಗವಾಗಿ ಇಲ್ಲಿ ಕೋಟೆ ಕಟ್ಟಲಾಗಿದೆ..." ಎಂಬುದಾಗಿ ಗಿರಿಯ ವರ್ಣನೆಯಿದೆ. ಶಿವಾಜಿ ಮಗ ಸಾಂಬಾಜಿ ಆಳ್ವಿಕೆಯ ಕಾಲದ್ದು ಎಂಬುದಾಗಿ ಇದರಲ್ಲಿ ಉಲ್ಲೇಖವಿರುವುದರಿಂದ 1680ರದ್ದು ಎಂದು ತಿಳಿದುಬರುತ್ತದೆ. ಅಂದರೆ ಮೂರೂಕಾಲು ಶತಮಾನಕ್ಕೂ ಹಳೆಯದು!

ಆ ಶಾಸನದ ಫೋಟೊ ಕ್ಲಿಕ್ಕಿಸಿ, ದೇವಸ್ಥಾನದ ಬಾಗಿಲ ನಿಲುವು ಕಂಬದ ಮೇಲಿನ ಹಳಗನ್ನಡ ಶಾಸನದ ಫೋಟೊ ಕ್ಲಿಕ್ಕಿಸಿಕೊಂಡು, ದೇವರ ದರ್ಶನ ಮಾಡಿಕೊಂಡು, ದೇವಸ್ಥಾನದ ಹೊರಗೆ ಬಂದೆವು. ಎಡಗಡೆ ಪೊಲೀಸ್ ಹೊರಠಾಣೆ, ನಂದಿಗಿರಿಧಾಮ ಎಂಬ ಫಲಕ ಕಾಣಿಸುತ್ತದೆ. ಅದರ ಪಕ್ಕದಲ್ಲಿಯೇ 'ಶಾಖಾ ಅಂಚೆ ಕಚೇರಿ, ನಂದಿ ಗಿರಿಧಾಮ' ಎಂಬುದಾಗಿಯೂ ಬರೆಯಲಾಗಿದೆ. ಮನೆಯೊಂದು ಎರಡು ಬಾಗಿಲು ಎಂಬಂತೆ ಒಂದೇ ಕಟ್ಟಡದಲ್ಲಿ ಪೊಲೀಸ್ ಹೊರಠಾಣೆ ಮತ್ತು ಶಾಖಾ ಅಂಚೆ ಕಚೇರಿಯಿದೆ. ನನ್ನ ಜೊತೆಗೆ ಬಂದಿದ್ದ ಗೆಳೆಯ ಅಜಿತ್‌ಗೆ, 'ಅಜಿತ್, ಪೋಸ್ಟ್ ಆಫೀಸ್‌ಗೆ ಹೋಗೋಣ' ಎಂದೆ. 'ಯಾಕೆ?' ಎಂದು ಅಚ್ಚರಿಯಿಂದ ಕೇಳಿದರು ಅಜಿತ್.

'ನಂದಿಬೆಟ್ಟದ ಈ ಅಂಚೆಕಚೇರಿಯು ವಿಶೇಷವಾದದ್ದು. ಇಲ್ಲಿನ ಅಂಚೆ ಕಚೇರಿಯಲ್ಲಿ ಸ್ಪೆಷಲ್ ಕ್ಯಾನ್ಸಲೇಷನ್ ಸೌಲಭ್ಯವಿದೆ. "ನಂದಿ" ಆಕಾರದ ಠಸ್ಸೆಯ ಗುರುತು ಹಾಕುವುದು ಇವರ ವೈಶಿಷ್ಟ್ಯ' ಎಂದು ಹೇಳುತ್ತಾ ಕರೆದುಕೊಂಡು ಹೋದೆ. ನಾವು ಬೆಳಗ್ಗೆ ಬೇಗ ಹೋಗಿದ್ದರಿಂದಾಗಿ ಇನ್ನೂ ಬಾಗಿಲು ತೆರೆದಿರಲಿಲ್ಲ.

ಇನ್ನೇನು ವಾಪಸ್ ಹೋಗಬೇಕು ಅನ್ನುವಷ್ಟರಲ್ಲಿ, ಅಜಿತ್, 'ಇದೇನಿದು ಸ್ಯಾಂಕೀಸ್ ರೂಮ್ಸ್ ಅಂತ ಇದೆಯಲ್ವಾ!' ಎನ್ನುತ್ತಾ ಗೋಡೆ ಮೇಲಿನ ಬರಹವನ್ನು ತೋರಿಸಿದರು.



ಸ್ಯಾಂಕೀಸ್ ರೂಮ್ಸ್ ಹಳೆಯ ಚಿತ್ರ



ರಿಚರ್ಡ್ ಸ್ಯಾಂಕಿ